**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**Spl.C.NDPS.8/2021**

| | | |
|---|---|---|
| ಸಾಕ್ಷಿದಾರರ ಹೆಸರು | : | ಗೋವಿಂದರಾಜ |
| ತಂದೆಯ ಹೆಸರು | : | ಸತ್ಯಪ್ಪ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಪಿ.ಸಿ., ಸಿ.ಇ.ಎನ್. ಪೊಲೀಸ್ ಠಾಣೆ ದಾವಣಗೆರೆ |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 11

ಸಿ.ಡಬ್ಲ್ಯೂ 5

ದಿ: 04-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ದಿಃ 08-10-2020 ರಿಂದ ಇಲ್ಲಿಯವರೆಗೆ ದಾವಣಗೆರೆಯ ಸಿ.ಇ.ಎನ್. ಪೊಲೀಸ್ ಠಾಣೆಯಲ್ಲಿ ಪಿ.ಸಿ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 03-04-2021 ರಂದು ನಾನು ಪೊಲೀಸ್ ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಸುಮಾರು ಬೆಳಿಗ್ಗೆ 10.00 ಗಂಟೆಗೆ ಚಾಸಾ-1 ರವರು ನನ್ನನ್ನು ಮತ್ತು ಚಾಸಾ-6 ರಿಂದ 10 ರವರನ್ನು ಅಕ್ರಮ ಗಾಂಜಾ ಮಾರಾಟ ಮಾಡುತ್ತಿದ್ದ ಬಗ್ಗೆ ಮಾಹಿತಿ ಬಂದಿದೆ ದಾಳಿ ಮಾಡಬೇಕು ಅಂತ ತಿಳಿಸಿದರು. ನಂತರ ಚಾಸಾ-7 ರವರಿಗೆ ದಾಳಿಯಲ್ಲಿ ಪತ್ರಾಂಕಿತ ಅಧಿಕಾರಿಗಳು ಮತ್ತು ಎಸ್.ಪಿ. ರವರ ಅನುಮತಿ ಪಡೆಯಲು ಕೋರಿಕೆ ಪತ್ರವನ್ನು ಕೊಟ್ಟು ಕಳುಹಿಸಿರುತ್ತಾರೆ. ಚಾಸಾ-8 ರವರ ಜೊತೆ ಅಬಕಾರಿ ವಲಯ -1 ಕಛೇರಿ

ದಾವಣಗೆರೆ ಇವರಿಗೆ ದಾಳಿ ಸಮಯದಲ್ಲಿ ಪಂಚರಾಗಿ ಸಹಕರಿಸಲು ಪಂಚರನ್ನು ಕಳುಹಿಸಿ ಕೊಡಲು ಕೋರಿಕೆ ಪತ್ರವನ್ನು ಕಳುಹಿಸಿಕೊಟ್ಟಿರುತ್ತಾರೆ. ಸುಮಾರು ಬೆಳಿಗ್ಗೆ 10.45 ಗಂಟೆಗೆ ಪತ್ರಾಂಕಿತ ಅಧಿಕಾರಿಯಾದ ಚಾಸಾ-4 ರವರು ಮತ್ತು ವಲಯ-1 ಕಛೇರಿಯಿಂದ ಚಾಸಾ-2 ಮತ್ತು 3 ರವರು CEN ಪೊಲೀಸ್ ಠಾಣೆಗೆ ಬಂದಿದ್ದು, ಚಾಸಾ-1 ರವರು ಮೇಲ್ಕಂಡರವರಿಗೆ ಚಿಂದೋಡಿ ಲೀಲಾ ರಂಗ ಮಂದಿರದ ಹತ್ತಿರ ಯಾರೋ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದಾರೆ ಅಂತ ಮಾಹಿತಿ ಬಂದಿದ್ದು, ಸದರಿ ದಾಳಿಯಲ್ಲಿ ಪಂಚರಾಗಿ ಸಹಕರಿಸಬೇಕು ಅಂತ ಕೇಳಿಕೊಂಡಾಗ, ಚಾಸಾ-2 ಮತ್ತು 3 ರವರು ಒಪ್ಪಿಗೆ ನೀಡಿದರು. ನಂತರ ಚಾಸಾ-10 ರವರ ಮೂಲಕ ಪಂಚರಿಗೆ ಪೊಲೀಸ್ ನೋಟಿಸ್ಸನ್ನು ಜಾರಿ ಮಾಡಲಾಯಿತು. ನಂತರ ಸುಮಾರು 11.00 ಗಂಟೆ ಸುಮಾರಿಗೆ ಇಲಾಖಾ ಜೀಪಿನಲ್ಲಿ ಚಾಸಾ-1 ರಿಂದ 4 ಹಾಗೂ ಸಿಬ್ಬಂದಿಗಳು ಹಾಗೂ ಲ್ಯಾಪ್ ಟಾಪ್, ಎಲೆಕ್ಟ್ರಿಕಲ್ ತೂಕದ ಯಂತ್ರ, Portable printer, Handy cam, IO Kit ನ್ನು ತೆಗೆದುಕೊಂಡು ಹದಡಿ ರಸ್ತೆಯ ಮುಖಾಂತರ ಆವರಗೆರೆಯ ಬಾಡಾ ಕ್ರಾಸ್ ನಲ್ಲಿರುವ ಗಣೇಶ ದೇವಸ್ಥಾನದ ಹತ್ತಿರ ಸ್ವಲ್ಪ ದೂರದಲ್ಲಿ ಜೀಪಗಳನ್ನು ನಿಲ್ಲಿಸಿ, ಅಲ್ಲಿ ಎಲ್ಲರೂ ಇಳಿದು ಚಾಸಾ-1 ರವರು ಪಂಚರ ಸಮೇತ ಎಲ್ಲರಿಗೂ ಅಂಗ ಶೋಧನೆ ಮಾಡಲು ತಿಳಿಸುತ್ತಾರೆ. ನಂತರ ಎಲ್ಲರೂ ಪರಸ್ಪರ ಅಂಗ ಶೋಧನೆ ಮಾಡಿಕೊಂಡು ನಮ್ಮಲ್ಲಿ ಯಾವುದೇ ಗಾಂಜಾಕ್ಕೆ ಸಂಬಂಧಿಸಿದ ವಸ್ತುಗಳು ಇಲ್ಲ ಅಂತ ಖಚಿತಪಡಿಸಿಕೊಂಡೆವು. ಸ್ವಲ್ಪ ದೂರದಲ್ಲಿ ಇಬ್ಬರು ಆಸ್ಸಾಮಿಗಳಿದ್ದು,ಒಬ್ಬನ ಕೈಯಲ್ಲಿ ಒಂದು ಪ್ಲಾಸ್ಟಿಕ್ ಚೀಲ ಇದ್ದು, ಅವರೊಂದಿಗೆ ಮರೆಮಾಚಿ ಅವರನ್ನು ಹಿಡಿಯಲು ಹೋದಾಗ ಅವರು ಕೈಯಲ್ಲಿ ಇದ್ದ ಚೀಲವನ್ನು ಅಲ್ಲೇ ಬಿಟ್ಟು ಓಡಿ ಹೋಗಲು ಪ್ರಯತ್ನ ಪಡುತ್ತಾರೆ, ಆಗ ನಾನು, ಚಾಸಾ-6 ಮತ್ತು 8 ರವರು ಚೀಲ ಹಿಡಿದುಕೊಂಡಿದ್ದವನನ್ನು ಹಿಡಿದುಕೊಂಡು ಬಂದು ಚಾಸಾ-1 ರವರ ಮತ್ತು ಪಂಚರ ಮುಂದೆ ಹಾಜರುಪಡಿಸಿರುತ್ತೇನೆ. ಮತ್ತೊಬ್ಬ ಆಸ್ಸಾಮಿಯನ್ನು ಚಾಸಾ-7, 9 ಮತ್ತು 10 ರವರು ಹಿಡಿದುಕೊಂಡು ಬಂದು ಚಾಸಾ-1 ರವರ ಮುಂದೆ ಹಾಜುರಪಡಿಸಿರುತ್ತಾರೆ. ನಂತರ ಚಾಸಾ-1 ರವರು ಆಸ್ಸಾಮಿ ಹೆಸರು

ಮತ್ತು ವಿಳಾಸ ಕೇಳಲಾಗಿ, ಆ ಪೈಕಿ ಅಂತರಾಮ ತೀರ್ಕಿ ತಂದೆ ಓಂ ಪ್ರಕಾಶ ತೀರ್ಕಿ, ದೋಣಿ ಓಡಿಸುವ ಕೆಲಸ, ಕೊಲ್ವಾ ಬೀಚ್, ಗೋವಾ ಅಂತ ತಿಳಿಸಿರುತ್ತಾರೆ. ಇನ್ನೊಬ್ಬ ತನ್ನ ಹೆಸರು ಮಧುರಾಜ ಯಾನೇ ಮಧುನಾಯ್ಕು ತಂದೆ ನರಸಿಂಹನಾಯ್ಕು, ಬಂಡೆಬಸ್ಸಾಪುರ ಗ್ರಾಮ, ಕೂಡ್ಲಿಗಿ ತಾಲ್ಲೂಕು ಹಾಲಿ ವಾಸಃ ಕೊಲ್ವಾ ಬೀಚ್, ಗೋವಾ ಅಂತ ತಿಳಿಸಿರುತ್ತಾರೆ.

3. ನಂತರ ಚಾಸಾ-1 ರವರು ಚೀಲದಲ್ಲಿ ಏನಿದೆ ಅಂತ ಕೇಳಿ ಪರಿಶೀಲಿಸಿದಾಗ ಅದರಲ್ಲಿ Brown color tape ನಿಂದ ಪ್ಯಾಕ್ ಮಾಡಿದ 3 ಬಂಡಲ್ ಗಳು ಮತ್ತು ಒಂದು ಬಿಳಿ ಬಣ್ಣದ ಪೇಪರ್ ಚೀಲದಲ್ಲಿ ಗಾಂಜಾ ಇದ್ದು, ಅದರ ಬಾಬ್ತು ವಿಚಾರಿಸಿದಾಗ ಆ ಗಾಂಜಾವನ್ನು ಕೊಲ್ವಾ ಬೀಚ್, ಗೋವಾದಲ್ಲಿರುವ ಅನಿಲ ಜಾಕೋಬರವರು (3 ನೇ ಆರೋಪಿ) ತಮಗೆ ತಂದು ಕೊಟ್ಟು ಇದನ್ನು ಮಾರಾಟ ಮಾಡಲು ತಿಳಿಸಿರುತ್ತಾರೆ. ಅದರಂತೆ ನಾವು ಒಂದು ಗಾಂಜಾ ಪ್ಯಾಕೆಟ್ ಗೆ ₹400/- ರಿಂದ ₹500/- ರೂಪಾಯಿಗೆ ಮಾರಾಟ ಮಾಡುತ್ತೇವೆ. ಬಂದ ಹಣವನ್ನು ಅನಿಲ ಜಾಕೋಬರವರಿಗೆ ಕೊಡುತ್ತೇವೆ. ಅದರಲ್ಲಿ ಅವರು ನಮಗೆ ಪಾಲುಕೊಡುತ್ತಾರೆ ಅಂತ ತಿಳಿಸಿರುತ್ತಾರೆ. ಚಾಸಾ-1 ರವರು ಸ್ಥಳಕ್ಕೆ ಪೊಲೀಸ್ ಜೀಪನ್ನು ಕರೆಸಿಕೊಂಡುಅದರಲ್ಲಿರುವ ಎಲೆಕ್ಟ್ರಿಕಲ್ ತೂಕವನ್ನು ತರಿಸಿಕೊಂಡು ಚಾಸಾ-7 ರವರ ಮೂಲಕ Brown color tape ನಿಂದ ಪ್ಯಾಕ್ ಮಾಡಿದ 3 ಬಂಡಲ್ ಗಳನ್ನು ಪಂಚರ ಸಮಕ್ಷಮ ಕತ್ತರಿ ಮೂಲಕ ಕಟ್ ಮಾಡಿ ನೋಡಿದಾಗ ಅದರಲ್ಲಿ ಮೊಗ್ಗು, ಕಾಂಡ, ಹೂವು ಒಳಗೊಂಡ ಗಾಂಜಾ ವಾಸನೆ ಬರುತ್ತಿತ್ತು. ಅದು ಮೇಲನೋಟಕ್ಕೆ ಗಾಂಜಾ ಅಂತ ಕಂಡು ಬಂತು. ನಂತರ ಅವುಗಳನ್ನು ತೂಕ ಮಾಡಿದಾಗ, ಅದರಲ್ಲಿ ಒಂದು ಬಂಡಲ್ ನ್ನು ತೂಕ ಮಾಡಿದಾಗ ಸುಮಾರು 2 ಕೆ.ಜಿ. 110 ಗ್ರಾಂ. ಗಾಂಜಾ ಇದ್ದು, ಅದನ್ನು ಕ್ರಮ ಸಂಖ್ಯೆ 1 ಅಂತ ಗುರುತು ನೀಡಲಾಯಿತು. ಅದರಲ್ಲಿ ಇನ್ನೊಂದು ಬಂಡಲ್ ನ್ನು ತೂಕ ಮಾಡಿದಾಗ ಸುಮಾರು 2 ಕೆ.ಜಿ. 215 ಗ್ರಾಂ. ಗಾಂಜಾ ಇದ್ದು, ಅದನ್ನು ಕ್ರಮ ಸಂಖ್ಯೆ 2 ಅಂತ ಗುರುತು ನೀಡಲಾಯಿತು. ಅದರಲ್ಲಿ ಮೂರನೇ ಬಂಡಲ್ ನ್ನು ತೂಕ ಮಾಡಿದಾಗ ಸುಮಾರು 2 ಕೆ.ಜಿ.

185 ಗ್ರಾಂ. ಗಾಂಜಾ ಇದ್ದು, ಅದನ್ನು ಕ್ರಮ ಸಂಖ್ಯೆ 3 ಅಂತ ಗುರುತು ನೀಡಲಾಯಿತು. ನಂತರ ಒಂದು ಬಿಳಿ ಬಣ್ಣದ ಪೇಪರ್ ಚೀಲದಲ್ಲಿ ಗಾಂಜಾ ತೂಕ ಮಾಡಿದಾಗ ಸುಮಾರು 2 ಕೆ.ಜಿ. 90 ಗ್ರಾಂ. ಗಾಂಜಾ ಇದ್ದು, ಅದನ್ನು ಕ್ರಮ ಸಂಖ್ಯೆ 4 ಅಂತ ಗುರುತು ನೀಡಲಾಯಿತು. ಒಟ್ಟಾರೆಯಾಗಿ 8 ಕೆ.ಜಿ. 600 ಗ್ರಾಂ. ಗಾಂಜಾ ಇರುವುದು ಕಂಡು ಬಂತು.

4. ನಂತರ ಚಾಸಾ-1 ರವರು ಆರೋಪಿತರ ಅಂಗ ಶೋಧನೆಯನ್ನು ನಾನು ಮಾಡಬಹುದಾ ಅಥವಾ ಪತ್ರಾಂಕಿತ ಅಧಿಕಾರಿಗಳು ಮಾಡಬಹುದಾ ಅಂತ ಕೇಳಿ ನೋಟಿಸ್ಸು ಮಾಡಿರುತ್ತಾರೆ. ನಂತರ ಆರೋಪಿತರು ಪತ್ರಾಂಕಿತ ಅಧಿಕಾರಿಗಳು ತಮ್ಮ ಅಂಗ ಶೋಧನೆ ಮಾಡಲು ಸಮ್ಮತಿ ಇದೆ ಅಂತ ಹೇಳಿದರು. ನಂತರ ಪತ್ರಾಂಕಿತ ಅಧಿಕಾರಿಗಳು ಮಧುರಾಜ ಯಾನೇ ಮಧುನಾಯ್ಕ(2 ನೇ ಆರೋಪಿ) ರವರ ಅಂಗ ಶೋಧನೆ ಮಾಡಿದಾಗ ಅವರ ಬಳಿ 100 ರೂಪಾಯಿಯ 9 ನೋಟುಗಳು ಹಾಗೂ 25 ಪ್ಲಾಸ್ಟಿಕ್ ಪಾಲಿಥಿನ್ ಕವರ್ ಗಳು ಇದ್ದವು. ಎಲ್ಲಿಂದ ಆ ಹಣ ಬಂದಿದೆ ಅಂತ ವಿಚಾರಿಸಿದಾಗ ಸದರಿ ಆರೋಪಿಯು ಗಾಂಜಾವನ್ನು ಮಾರಾಟ ಮಾಡಿ ಗಳಿಸಿದ ಹಣ ಅಂತ ಹೇಳಿದರು ಮತ್ತು ಪಾಲಿಥಿನ್ ಕವರ್ ಗಳಲ್ಲಿ ಗಾಂಜಾವನ್ನು ಹಾಕಿ ಮಾರಾಟ ಮಾಡುತ್ತೇವೆ ಅಂತ ಹೇಳಿದರು.

5. ಇನ್ನೊಬ್ಬ ಆರೋಪಿಯಾದ ಅಂತರಾಮ ತೀರ್ಕಿರವರ ಅಂಗ ಶೋಧನೆ ಮಾಡಿದಾಗ ಅವರ ಬಳಿ ಗಾಂಜಾಕ್ಕೆ ಸಂಬಂಧಿಸಿದ ಯಾವುದೇ ವಸ್ತುಗಳು ದೊರಕಿರುವುದಿಲ್ಲ. ಅವರ ಬಳಿ ಒಂದು ಕಪ್ಪುಬಣ್ಣದ MI ಕಂಪನಿಯ ಮೊಬೈಲ್ ಇತ್ತು. ನಂತರ ಆ ಮೊಬೈಲ್ ನ್ನು ಪರಿಶೀಲಿಸಿದಾಗ, ಅದರಲ್ಲಿ ಒಂದು ಏರಟೆಲ್ ಮತ್ತು ಒಂದು ಜಿಯೋ ಸಿಮ್ ಇತ್ತು. ನಂತರ ಚಾಸಾ-1 ರವರು ಚಾಸಾ-10 ರವರ ಮೂಲಕ ಪೊಲೀಸ್ ಜೀಪನ ಬ್ಯಾಟರಿಯನ್ನು ಬಳಸಿಕೊಂಡು ಸದರಿ ವಸ್ತುಗಳ ಮಾಹಿತಿಯನ್ನು ಬರೆದು ಬೆಳಿಗ್ಗೆ 11.40 ರಿಂದ ಮಧ್ಯಾಹ್ನ 1.30 ರವರೆಗೆ ಮಹಜರ ಮಾಡಿರುತ್ತಾರೆ. ಪಂಚನಾಮೆಯನ್ನು ಪ್ರಿಂಟ್ ತೆಗೆಸಲಾಯಿತು. ತೂಕ ಮಾಡಿದ ಗಾಂಜಾಕ್ಕೆ ಸಂಬಂಧಿಸಿದ ವಸ್ತುಗಳನ್ನು ಚಾಸಾ-7 ರವರ ಮೂಲಕ

ಒಂದು ಬಿಳಿ ಚೀಲದಲ್ಲಿ ಹಾಕಿ CEN ಅಂತ ಅರಗಿನಿಂದ ಸೀಲ್ ಮಾಡಿರುತ್ತಾರೆ. ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-12 ಅಂತ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-12(ಹೆಚ್) ಅಂತ ಗುರುತಿಸಲಾಯಿತು.

6. ಪಂಚನಾಮೆಯ ಸಮಯದಲ್ಲಿ 1 ನೇ ಆರೋಪಿಗೆ ಕನ್ನಡ ಭಾಷೆ ಬರದೇ ಇರುವುದರಿಂದ ಪಂಚನಾಮೆಯಲ್ಲಿ ಬರೆದಿರುವ ಅಂಶವನ್ನು ಚಾಸಾ-3 ಮತ್ತು 4 ರವರು ಹಿಂದಿ ಭಾಷೆಗೆ ಭಾಷಾಂತರ ಮಾಡಿ ತಿಳಿಸಿರುತ್ತಾರೆ. ಮಹಜರನ್ನು ಚಾಸಾ-10 ರವರು ತಯಾರಿಸಿರುತ್ತಾರೆ. ಚಾಸಾ-9 ರವರು ಠಾಣೆಯ ಹ್ಯಾಂಡಿ ಕ್ಯಾಮ್ ನಲ್ಲಿ ಪೋಟೋಗಳನ್ನು ತೆಗೆದಿರುತ್ತಾರೆ. ಆ ಪೋಟೋಗಳು ಈಗ ನನಗೆ ತೋರಿಸಿದ ನಿಪಿ-13 ರಿಂದ 21 ಇರುತ್ತವೆ. ಈ ಪೋಟೋಗಳಲ್ಲಿ 1 ಮತ್ತು 2 ನೇ ಆರೋಪಿತರು, ಚಾಸಾ-1 ರಿಂದ 4, ಮೇಲಾಧಿಕಾರಿಗಳು ಹಾಗೂ ಗಾಂಜಾ ಮತ್ತು ಗಾಂಜಾವನ್ನು ತೂಕ ಮಾಡುತ್ತಿರುವ ಸಲಕರಣೆಗಳು ಕಂಡು ಬರುತ್ತವೆ. 2 ನೇ ಆರೋಪಿಯನ್ನು ಗೋವಾ VC ಯಿಂದ ಹಾಜರುಪಡಿಸಿದ್ದು, ಅವರನ್ನು ನೋಡಿ ಈತನೇ 2 ನೇ ಆರೋಪಿ ಮಧುರಾಜ ಅಂತ ಗುರುತಿಸುತ್ತೇನೆ. ತಲೆ ಮರೆಸಿಕೊಂಡ 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗಾಗಲೇ ಗುರುತಿಸಿರುವ ಮು.ಮಾ.1 ರಿಂದ 8 ನ್ನು ನೋಡಿದರೆ ಗುರುತಿಸುತ್ತೇನೆ. ಮು.ಮಾ.5 ರ ಹಣ Treasury box ನಲ್ಲಿದ್ದು, ಅದನ್ನು ಗುರುತಿಸುವ ಬಗ್ಗೆ ಆರೋಪಿತರ ಪರ ವಕೀಲರು ತಕರಾರು ಇಲ್ಲ ಅಂತ ಹೇಳಿರುತ್ತಾರೆ. ಪಂಚನಾಮೆ ಪ್ರಕ್ರಿಯೆ ಮುಗಿದ ನಂತರ ಆರೋಪಿತರು,ಮಾಲುನೊಂದಿಗೆ ಠಾಣೆಗೆ ಬಂದು ಮುಂದಿನ ಕ್ರಮ ಜರುಗಿಸಲಾಯಿತು.

7. ನಂತರ ದಿಃ 06-04-2021 ರಂದು ಚಾಸಾ-1 ರವರು ನನಗೆ ಈಪ್ರಕರಣದ PF.No.25 ರಲ್ಲಿನ ಬಿಳಿ ಬಟ್ಟೆಯಲ್ಲಿ ಸುತ್ತಿದ 04 ವಸ್ತುಗಳನ್ನು ಮತ್ತು ದಾಖಲಾತಿಗಳನ್ನು ತೆಗೆದುಕೊಂಡು FSL ಬೆಂಗಳೂರವರಿಗೆ ಕೊಟ್ಟು ಬರಲು ರಹದಾರಿ ಪತ್ರ ನೀಡಿರುತ್ತಾರೆ. ರಹದಾರಿ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-43 ಅಂತ ಗುರುತಿಸಲಾಗಿದೆ. ಅದರಂತೆ ಮೇಲಾಧಿಕಾರಿಗಳ ಸಹಿ

ಪಡೆದು ದಿಃ 08-04-2021 ರಂದು FSL ಬೆಂಗಳೂರರವರಿಗೆ F.No.25 ರಲ್ಲಿನ Inventory ಮಾಡಿದ ಗಾಂಜಾದ sample ನ್ನು ಮತ್ತು ದಾಖಲಾತಿಗಳನ್ನು ಕೊಟ್ಟು ಸ್ವೀಕೃತಿ ಪಡೆದುಕೊಂಡಿರುತ್ತೇನೆ. ಆ ಸ್ವೀಕೃತಿ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-44 ಅಂತ ಗುರುತಿಸಲಾಗಿದೆ. ಸದರಿ ಸ್ವೀಕೃತಿಯನ್ನು ದಿಃ 09-04-2021 ರಂದು ಬಂದು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಆ Sample ಗಳನ್ನು ಈಗ ನೋಡುತ್ತಿದ್ದು, ಅವು ಮು.ಮಾ.1 ರಿಂದ 4 ಇರುತ್ತವೆ. ಅವುಗಳನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಶ್ರೀ ಕೆ.ಕೆ.(ಎಲ್.ಎ.ಡಿ.ಸಿ.), ವಕೀಲರಿಂದ 2 ನೇ ಆರೋಪಿತರ ಪರವಾಗಿ**:

8. ಆ ದಿನ ನಾನು ಮತ್ತು ನಮ್ಮ ಮೇಲಾಧಿಕಾರಿಗಳು ಸ್ವತಂತ್ರ ಪಂಚರನ್ನು ಕರೆಸಲು ಪ್ರಯತ್ನ ಮಾಡಿಲ್ಲ ಅಂದರೆ ನಾವು official witness ನ್ನು ಕರೆಸಿದ್ದೆವು. ಅಮಾನತ್ತುಪಡಿಸಿಕೊಂಡಿದ್ದೇವೆ ಅಂತ ಹೇಳಲಾದ ಗಾಂಜಾದಲ್ಲಿ ಎಷ್ಟು ಹೂವು, ಕಾಂಡಾ, ಬೇರು, ಮೊಗ್ಗು, ಬೀಜ ಮತ್ತು ಎಲೆ ಇದ್ದವು ಅಂತ ಹೇಳಲು ಬರುವುದಿಲ್ಲ. ಆ ದಿನ ವಿಡಿಯೋಗ್ರಾಫಿ ಮಾಡಿಲ್ಲ ಅಂದರೆ ಸರಿಯಲ್ಲ. ಚಿಂದೋಡಿ ರಂಗಲೀಲಾ ಮಂದಿರದ ಹತ್ತಿರ 24 ಗಂಟೆ ಜನ ಓಡಾಡುತ್ತಾರೆ ಅಂದರೆ ನಿಜ. ಸಾರ್ವಜನಿಕರಲ್ಲಿ ಯಾರನ್ನು ಸಾಕ್ಷಿದಾರರನ್ನಾಗಿ ಮಾಡಲು ನಾವು ಪ್ರಯತ್ನಿಸಿಲ್ಲ. Highway ಯಿಂದ ಚಿಂದೋಡಿ ರಂಗಲೀಲಾ ಮಂದಿರಕ್ಕೆ ಹೋಗಬೇಕಾದರೆ ಎಡಗಡೆಗೆ ಸಂಚಾರ ಪೊಲೀಸರು ಮತ್ತು Highway squard ಇದ್ದೇ ಇರುತ್ತಾರೆ ಅಂದರೆ ಸರಿಯಲ್ಲ. ಅಲ್ಲಿ ಒಂದು ಗಣೇಶ ದೇವಸ್ಥಾನ ಇದೆ ಅಂದರೆ ನಿಜ. ಅಲ್ಲಿ ಸಿಸಿಟಿವಿ ಇದೆ ಅಂದರೆ 100-150 ಮೀ. ದೂರ ಇದೆ. ಆ ಸಮಯದಲ್ಲಿ ಸಿಸಿಟಿವಿ ಇರಲಿಲ್ಲ. ಆ ಸಮಯದಲ್ಲಿ ಸಿಸಿಟಿವಿ ಇದ್ದರೂ ಸಹ ಇಲ್ಲ ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪಂಚನಾಮೆ ಆದ ನಂತರ Sample seal ಪಿ.ಐ. ರವರ ಕಡೆ ಇರುತ್ತದೆ.

9. ಚಾಸಾ-2 ರವರು ಚಾಸಾ-1 ಮತ್ತು 4 ರವರ ಅಂಗ ಶೋಧನೆ ಮಾಡಿದರು. ಚಾಸಾ-3 ರವರು ಸಿಬ್ಬಂದಿಗಳ ಅಂಗ ಶೋಧನೆ ಮಾಡಿದರು. ಚಾಸಾ-1 ಮತ್ತು 4 ರವರು ಚಾಸಾ-2 ಮತ್ತು 2 ರವರ ಅಂಗ ಶೋಧನೆ ಮಾಡಿದರು. 2 ನೇ ಆರೋಪಿಯು ತನಗೆ ನ್ಯಾಯಾಧೀಶರ ಸಮಕ್ಷಮದಲ್ಲಿ ಅಂಗ ಶೋಧನೆ ಮಾಡಲು ಹೇಳಿದರು ಅಂದರೆ ಸರಿಯಲ್ಲ. ಆಗ ನಮ್ಮ ಮೇಲಾಧಿಕಾರಿಗಳು ಅವರಿಗೆ ಬೆದರಿಸಿದರು ಅಂದರೆ ಸುಳ್ಳು. ಕೆಲವು ದಾಖಲೆಗಳಿಗೆ ನಮ್ಮ ಮೇಲಾಧಿಕಾರಿಗಳು ಆರೋಪಿಯನ್ನು ಹೆದರಿಸಿ ಸಹಿ ಪಡೆದುಕೊಂಡಿದ್ದಾರೆ ಅಂದರೆ ಸರಿಯಲ್ಲ. ನಿಪಿ-12 ರ ಪಂಚನಾಮೆ, ನಿಪಿ-13 ರಿಂದ 21 ರ ಪೋಟೋಗಳನ್ನು ನಿಪಿ-23 ರ ಕಚ್ಚಾ ನಕಾಶೆಯನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿದ್ದು ಇರುತ್ತದೆ ಅಂದರೆ ಸರಿಯಲ್ಲ. ನಿಪಿ-23 ರ ಕಚ್ಚಾ ನಕಾಶೆಗೂ ಮತ್ತು ನಿಪಿ-12 ರ ಪಂಚನಾಮೆಯಲ್ಲಿ ಬರೆದಿರುವ ಸ್ಥಳಕ್ಕೆ ಒಂದಕ್ಕೊಂದು ತಾಳೆಯಾಗುವುದಿಲ್ಲ ಅಂದರೆ ಸರಿಯಲ್ಲ. ಗಾಂಜಾ sample ನ್ನು ದಿಃ 06-04-2021 ರಿಂದ 08-04-2021 ರವರೆಗೆ ಪಿ.ಐ. ರವರ ಬಳಿ ಇತ್ತು. RFSL ಗೆ ನಾನು sample ನ್ನುಕೊಟ್ಟ ಬಗ್ಗೆ ಅವರು chain of custody ಬಾಬ್ತು ಏನೂ ಇರುವುದಿಲ್ಲ, ಆದರೆ ಸ್ವೀಕೃತಿ ನೀಡಿರುತ್ತಾರೆ.

10. ದಾಳಿ ಮಾಡುವ ಕಾಲಕ್ಕೆ ತೂಕ ಮತ್ತು ಅಳತೆ ಇಲಾಖೆಯವರನ್ನು ಕರೆದುಕೊಂಡು ಹೋಗಿರಲಿಲ್ಲ. Crime photographer ರವರನ್ನು ಕರೆದುಕೊಂಡು ಹೋಗಿಲ್ಲ. ನಾನು ಹೇಳುವಂತಹ ವಸ್ತು ಗಾಂಜಾನೇ ಅಲ್ಲ ಅಂದರೆ ಸರಿಯಲ್ಲ. 2 ನೇ ಆರೋಪಿಯಿಂದ ಯಾವುದೇ ಗಾಂಜಾ ಅಥವಾ ವಸ್ತುಗಳನ್ನು ಅಮಾನತ್ತು ಮಾಡಿಕೊಂಡಿಲ್ಲ ಅಂದರೆ ಸರಿಯಲ್ಲ. 2 ನೇ ಆರೋಪಿಊರಿಗೆ ಹೋಗುತ್ತಿರುವವನ್ನು ಕರೆದುಕೊಂಡು ಬಂದು ಆತನ ಮೇಲೆ ಸುಳ್ಳು ಪ್ರಕರಣ ದಾಖಲು ಮಾಡಿದ್ದೇವೆ ಅಂದರೆ ಸರಿಯಲ್ಲ. 2 ನೇ ಆರೋಪಿಯಿಂದ ಹಣ ವಶಪಡಿಸಿಕೊಂಡಿದ್ದು ಸುಳ್ಳು ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಷಯ ಸುಳ್ಳು ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.